All India Radio: Bangalore
National Bulletin In Kannada
30.12.2025 7.35 am
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
<><><*><><<>

ಮುಖ್ಯಾಂಶಗಳು

೧. ಪ್ರಧಾನಿ ನರೇಂದ್ರ ಮೋದಿ ಇಂದು ನೀತಿ ಆಯೋಗದ ಪ್ರಮುಖ ಅರ್ಥಶಾಸ್ತ್ರಜ್ಞರು ಮತ್ತು ವಿಷಯ ತಜ್ಞರೊಂದಿಗೆ ಸಭೆ

೨. ಕೇರಳ ಪ್ರವಾಸದಲ್ಲಿರುವ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ವರ್ಕಳದ ಶಿವಗಿರಿ ಯಾತ್ರೆಯಲ್ಲಿ ಭಾಗಿ

೩. ಬೆಂಗಳೂರಿನಲ್ಲಿಂದು ಧೃವ್ ಎನ್.ಜಿ ಹೆಲಿಕಾಪ್ಟರ್ ಹಾರಾಟಕ್ಕೆ ಕೇಂದ್ರ ಸಚಿವ ಕೆ.ಆರ್.ಮೋಹನ್ ನಾಯ್ಡು ಚಾಲನೆ

೪. ಬರುವ ಫೆಬ್ರವರಿಯಲ್ಲಿ ದೆಹಲಿಯಲ್ಲಿ ಕೃತಕ ಬುದ್ಧಿಮತ್ತೆ ಪರಿಣಾಮಗಳ ಶೃಂಗಸಭೆ ಆಯೋಜನೆ

೫. ಮಹಿಳಾ ಟಿ-೨೦ ಕ್ರಿಕೆಟ್ ಸರಣಿ ; ತಿರುವನಂತಪುರದ ಅಂತಿಮ ಪಂದ್ಯದಲ್ಲಿ ಭಾರತ-ಶ್ರೀಲಂಕಾ ಸೆಣಸು

<><><*><><<>

ಪ್ರಮುಖ ಆರ್ಥಿಕ ನಿರ್ಧಾರಗಳನ್ನು ಕೈಗೊಳ್ಳುವ ಮುನ್ನ ಸರ್ಕಾರ ನಡೆಸುತ್ತಿರುವ ಸಮಾಲೋಚನೆಗಳ ಭಾಗವಾಗಿ, ಪ್ರಧಾನಿ ನರೇಂದ್ರ ಮೋದಿ ಇಂದು ನೀತಿ ಆಯೋಗದಲ್ಲಿ ಪ್ರಮುಖ ಅರ್ಥಶಾಸ್ತ್ರಜ್ಞರು ಮತ್ತು ವಿಷಯ ತಜ್ಞರೊಂದಿಗೆ ಸಭೆ ನಡೆಸಲಿದ್ದಾರೆ. ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಈ ಸಂವಾದದಲ್ಲಿ ಭಾಗವಹಿಸುವರು. ಈ ಚರ್ಚೆಯಲ್ಲಿ ಪ್ರಮುಖ ಆರ್ಥಿಕ ವಿಷಯಗಳ ಮೇಲೆ ಹೆಚ್ಚಿನ ಗಮನ ಕೇಂದ್ರೀಕರಿಸುವ ನಿರೀಕ್ಷೆಯಿದೆ. ದೇಶದ ಸದ್ಯದ ಆರ್ಥಿಕ ಪರಿಸ್ಥಿತಿ ಮತ್ತು ಭವಿಷ್ಯದ ಆದ್ಯತೆಗಳ ಕುರಿತು ತಜ್ಞರು ತಮ್ಮ ಅಭಿಪ್ರಾಯ ಹಂಚಿಕೊಳ್ಳಲು ಈ ಸಭೆಯು ವೇದಿಕೆಯಾಗಲಿದೆ. ಮುಂಬರುವ ಕೇಂದ್ರ ಬಜೆಟ್ ಕುರಿತು ಅರ್ಥಶಾಸ್ತ್ರಜ್ಞರಿಂದ ಸಲಹೆಗಳು ಮತ್ತು ದೂರದೃಷ್ಟಿಗಳನ್ನು ಪ್ರಧಾನಿ ಅವರು ಆಲಿಸುವ ನಿರೀಕ್ಷೆಯಿದೆ. ದೇಶೀಯ ಮತ್ತು ಜಾಗತಿಕ ಎರಡೂ ಆರ್ಥಿಕ ದೂರದೃಷ್ಟಿಗಳೂ ಸಹ ಸಂವಾದದ ಪ್ರಮುಖವಾಗಿ ಚರ್ಚೆಗೊಳಪಡುವ ನಿರೀಕ್ಷೆಯಿದೆ.

ಬೆಳವಣಿಗೆಯ ನಿರೀಕ್ಷೆಗಳು, ಹಣಕಾಸು ನಿರ್ವಹಣೆ ಮತ್ತು ದೀರ್ಘಾವಧಿಯ ಅಭಿವೃದ್ಧಿಯನ್ನು ಉಳಿಸಿಕೊಳ್ಳಲು ಅಗತ್ಯವಿರುವ ರಚನಾತ್ಮಕ ಕ್ರಮಗಳ ಕುರಿತು ತಜ್ಞರು ತಮ್ಮ ಅಭಿಪ್ರಾಯಗಳನ್ನು ಮಂಡಿಸುವ ಸಾಧ್ಯತೆಯಿದೆ. ಸರ್ಕಾರವು ಮುಂದಿನ ಹಂತದ ಆರ್ಥಿಕ ಯೋಜನೆಗೆ ಸಿದ್ಧತೆ ನಡೆಸುತ್ತಿರುವಾಗ ನೀತಿ ಆಯೋಗದಲ್ಲಿನ ಸಂವಾದವು ಅಮೂಲ್ಯವಾದ ಒಳನೋಟಗಳನ್ನು ಒದಗಿಸುವ ನಿರೀಕ್ಷೆಯಿದೆ.

<>><><*><><<>

ಕೇರಳ ಪ್ರವಾಸದಲ್ಲಿರುವ ಉಪರಾಷ್ಟ್ರಪತಿ ಸಿ.ಪಿ.ರಾದಾಕೃಷ್ಣನ್ ಅವರು ಇಂದು ವರ್ಕಳದಲ್ಲಿ ೯೩ನೇ ಶಿವಗಿರಿ ತೀರ್ಥಯಾತ್ರೆಯಲ್ಲಿ ಭಾಗವಹಿಸಲಿದ್ದಾರೆ, ನಂತರ ಅವರು ತಿರುವನಂತಪುರದ ಮಾರ್ ಇವಾನಿಯೋಸ್ ಕಾಲೇಜಿನ ಪ್ಲಾಟಿನಂ ಜುಬಿಲಿ ಆಚರಣೆಯ ಸಮಾರೋಪದ ಅಂಗವಾಗಿ ನಡೆಯುವ ಸಾರ್ವಜನಿಕ ಸಭೆಯನ್ನು ಉದ್ಘಾಟಿಸಲಿದ್ದಾರೆ. ನಿನ್ನೆ ತಿರುವನಂತಪುರದ ಎಲ್‌ಎಂಎಸ್ ಚರ್ಚ್ ಕಾಂಪೌಂಡ್‌ನಲ್ಲಿ ನಡೆದ 'ದಿ ತ್ರಿವೇಂಡ್ರಮ್ ಫೆಸ್ಟ್ ೨೦೨೫' ಸಭೆಯಲ್ಲಿ ಮಾತನಾಡಿದ ಅವರು, ಸಮುದಾಯ ಮನೋಭಾವ ಮತ್ತು ಧಾರ್ಮಿಕ ಸಾಮರಸ್ಯದೊಂದಿಗೆ ಸಮಾಜದ ಅಭಿವೃದ್ಧಿ ಮತ್ತು ಯೋಗಕ್ಷೇಮಕ್ಕಾಗಿ ಜನರು ಒಗ್ಗೂಡಬೇಕೆಂದು ಕರೆ ನೀಡಿದರು. ಜನರು ಒಟ್ಟಾಗಿ ಧಾರ್ಮಿಕ ಹಬ್ಬಗಳನ್ನು ಆಚರಿಸಿದಾಗ ಪ್ರಜಾಪ್ರಭುತ್ವ, ಕೋಮು ಸಾಮರಸ್ಯ ಮತ್ತು ಅಭಿವೃದ್ಧಿಯ ನಿಜವಾದ ಚೈತನ್ಯವನ್ನು ಕಾಣಬಹುದು ಎಂದು ರಾಧಾಕೃಷ್ಣನ್ ಹೇಳಿದರು.

<>><><*><><<>

ಕೇಂದ್ರ ನಾಗರಿಕ ವಿಮಾನಯಾನ ಸಚಿವ ಕೆ.ಆರ್.ಮೋಹನ್ ನಾಯ್ಡು ಅವರು ಬೆಂಗಳೂರಿನಲ್ಲಿಂದು ಧೃವ್ ಎನ್ ಜಿ ಹೆಲಿಕಾಪ್ಟರ್ ಹಾರಾಟಕ್ಕೆ ಚಾಲನೆ ನೀಡಲಿದ್ದಾರೆ. ಮುಂದಿನ ಪೀಳಿಗೆಯ ಈ ಅತ್ಯಾಧುನಿಕ ಲಘು ಹೆಲಿಕಾಪ್ಟರ್ ಅನ್ನು ಎಚ್.ಎ.ಎಲ್ ಸಂಸ್ಥೆ ಅಭಿವೃದ್ಧಿ ಸಂಸ್ಥೆ ಅಭಿವೃದ್ಧಿಪಡಿಸಿದ್ದು, ಅದನ್ನು ಈ ವರ್ಷದ ಆರಂಭದಲ್ಲಿ ನಡೆದ ಏರೋ ಶೋ-೨೦೨೫ರಲ್ಲಿ ಪ್ರದರ್ಶಿಸಲಾಗಿತ್ತು.  ೮ ರಿಂದ ೧೪ ಪ್ರಯಾಣಿಕರ ಸಾಮರ್ಥ್ಯದ ಈ ಹೆಲಿಕಾಪ್ಟರ್ ಅನ್ನು ಪ್ರವಾಸೋದ್ಯಮ, ಗಣ್ಯರ ಪ್ರವಾಸ, ವಿಪತ್ತು ಮತ್ತು ಪ್ರವಾಹ ನಿರ್ವಹಣೆ ಮತ್ತಿತರ ಕಾರ್ಯಗಳಿಗೆ ಬಳಸಬಹುದಾಗಿದೆ. ಈ ಹೆಲಿಕಾಪ್ಟರ್ ಸ್ವದೇಶಿ ಶಕ್ತಿ ಇಂಜಿನ್ ಹೊಂದಿದೆ.

<>><><*><><<>

ದೇಶ ಎದುರಿಸುತ್ತಿರುವ ತ್ಯಾಜ್ಯ ನಿರ್ವಹಣೆ ಮತ್ತು ಸುಸ್ಥಿರತೆಯಂತಹ ಸವಾಲುಗಳನ್ನು ಪರಿಹರಿಸಲು ಸಾಮಾಜಿಕ, ಆರ್ಥಿಕ ಆಯಾಮಗಳನ್ನೊಳಗೊಂಡ ತಾಂತ್ರಿಕ ಪರಿಣತಿ ಅತ್ಯಗತ್ಯ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದ್ದಾರೆ.

ಅವರು, ಜೆಮ್‌ಶೆಡ್‌ಪುರದ ರಾಷ್ಟ್ರೀಯ ತಾಂತ್ರಿಕ ಸಂಸ್ಥೆ-ಎನ್‌ಐಟಿಯ ೧೫ನೇ ಘಟಿಕೋತ್ಸವ ಉದ್ದೇಶಿಸಿ ಮಾತನಾಡಿದರು. ಮನುಕುಲದ ಕಲ್ಯಾಣಕ್ಕಾಗಿ ವಿದ್ಯಾರ್ಥಿಗಳು, ತಾಂತ್ರಿಕ ಪ್ರಗತಿಯನ್ನು ಬಳಕೆ ಮಾಡಿಕೊಳ್ಳಬೇಕು. ಶಿಕ್ಷಣ ಸಂಸ್ಥೆಗಳನ್ನು ಅವುಗಳ ರ‍್ಯಾಂಕಿಂಗ್ ಮತ್ತು ವಿದ್ಯಾರ್ಥಿಗಳ ಉದ್ಯೋಗ ನಿಯೋಜನೆಯಿಂದ ಅಳೆಯಬಾರದು. ಸಂಸ್ಥೆಗಳು ಸಮಾಜಕ್ಕೆ ಏನು ಕೊಡುಗೆ ನೀಡಿವೆ ಎಂಬುದು ಮುಖ್ಯವಾಗುತ್ತದೆ ಎಂದು ರಾಷ್ಟ್ರಪತಿ ಹೇಳಿದರು.

ಧ್ವನಿ: ರಾಷ್ಟ್ರಪತಿ ದ್ರೌಪದಿ ಮುರ್ಮು ( ೨೫ ಸೆಕೆಂಡ್ಸ್)

<>><><*><><<>

ಕೇಂದ್ರ ಗೃಹ ಸಚಿವ ಮತ್ತು ಹಿರಿಯ ಬಿಜೆಪಿ ನಾಯಕ ಅಮಿತ್ ಶಾ ಅವರು ನಿನ್ನೆ ಸಂಜೆ ಪಶ್ಚಿಮ ಬಂಗಾಳಕ್ಕೆ ಆಗಮಿಸಿದ್ದು, ಇಂದು ಅವರು ಪಕ್ಷದ ಹಲವು ಸಂಘಟನಾ ಸಭೆಗಳು ಮತ್ತು ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ಅವರನ್ನು ವಿಮಾನ ನಿಲ್ದಾಣದಲ್ಲಿ ಬಿಜೆಪಿ ರಾಜ್ಯ ಅಧ್ಯಕ್ಷ ಸಮಿಕ್ ಭಟ್ಟಾಚಾರ್ಯ ಮತ್ತು ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿ ಸ್ವಾಗತಿಸಿದರು. ಗೃಹ ಸಚಿವರು ಮುಂಬರುವ ವಿಧಾನಸಭಾ ಚುನಾವಣೆಗೆ ಚುನಾವಣಾ ತಂತ್ರಗಳನ್ನು ರೂಪಿಸುವ ಸಂಬಂಧ ಇಂದು ಮತ್ತು ನಾಳೆ ರಾಜ್ಯ ಪಕ್ಷದ ಪದಾಧಿಕಾರಿಗಳೊಂದಿಗೆ ಹಲವಾರು ಉನ್ನತ ಮಟ್ಟದ ಸಭೆಗಳನ್ನು ನಡೆಸಲಿದ್ದಾರೆ. ಅವರ ಮೊದಲ ಪ್ರಮುಖ ಸಂಘಟನಾ ಸಭೆ ಇಂದು ಬಿಧಾನ್ ನಗರದಲ್ಲಿ ನಡೆಯಲಿದೆ.

<>><><*><><<>

ಬರುವ ಫೆಬ್ರವರಿಯಲ್ಲಿ ನವದೆಹಲಿಯಲ್ಲಿ ಕೃತಕ ಬುದ್ಧಿಮತ್ತೆ-ಎಐ ಪರಿಣಾಮಗಳ ಶೃಂಗಸಭೆಯನ್ನು ಆಯೋಜಿಸಲಾಗುವುದು ಎಂದು ಕೇಂದ್ರ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಾಜ್ಞಾನದ ಸಚಿವಾಲಯದ ಕಾರ್ಯದರ್ಶಿ ಎಸ್.ಕೃಷ್ಣನ್ ಹೇಳಿದ್ದಾರೆ. ದೆಹಲಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಫೆಬ್ರವರಿ ೧೫ರಿಂದ ಆರಂಭವಾಗುವ ಶೃಂಗಸಭೆ ೨೦ ಕ್ಕೆ ಸಮಾಪನಗೊಳ್ಳಲಿದೆ. ಇದು ಎಐ ನ ಸಮಗ್ರ ಭವಿಷ್ಯ, ಜವಾಬ್ದಾರಿಯುತ ಬಳಕೆ ಮತ್ತು ಸ್ಥಿತಿಸ್ಥಾಪಕತ್ವವನ್ನು ರೂಪಿಸಲಿದೆ ಎಂದು ತಿಳಿಸಿದರು. ಕೃತಕಬುದ್ಧಿಮತ್ತೆ ಮತ್ತು ತಂತ್ರಾಜ್ಞಾನ ಬಳಕೆಯಲ್ಲಿನ ಕೊರತೆಗಳನ್ನು ನೀಗಿಸಲು ಈ ಶೃಂಗಸಭೆ ಒಂದು ವೇದಿಕೆಯಾಗಲಿದೆ ಎಂದ ಅವರು, ೧೪೦ ಕ್ಕೂ ಅಧಿಕ ರಾಷ್ಟ್ರಗಳ ಕೃತಕಬುದ್ಧಿಮತ್ತೆ ನಾಯಕರು, ಚಿಂತಕರು ಹಾಗೂ ಅಭಿವೃದ್ಧಿಕಾರರು ಶೃಂಗಸಭೆಯಲ್ಲಿ ಭಾಗವಹಿಸಲಿದ್ದಾರೆ.

ಈ ಶೃಂಗಸಭೆ, ಕೃತಕ ಬುದ್ಧಿಮತ್ತೆಯನ್ನು ಮನುಕುಲದ ಅಭಿವೃದ್ಧಿ, ಆರೋಗ್ಯ ರಕ್ಷಣೆ, ಶಿಕ್ಷಣ ಹಾಗೂ ಕೃಷಿ ವಲಯಗಳಲ್ಲಿ ಹೇಗೆಲ್ಲಾ ಬಳಸಿಕೊಳ್ಳಬಹುದು ಎಂಬ ಬಗ್ಗೆ ಬೆಳಕು ಚೆಲ್ಲಲಿದೆ ಎಂದು ಹೇಳಿದರು.

ಧ್ವನಿ: ಎಸ್.ಕೃಷ್ಣನ್, ಕಾರ್ಯದರ್ಶಿ ( ೩೪ ಸೆಕೆಂಡ್ಸ್)

<>><><*><><<>

ಒಡಿಸಾದ ಚಾಂಡಿಪುರದ ಸಮಗ್ರ ಪರೀಕ್ಷಾ ನೆಲೆಯಲ್ಲಿ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ-ಡಿಆರ್‌ಡಿಒ ಪಿನಾಕಾ ಲಾಂಗ್ ರೇಂಜ್ ಗೈಡೆಡ್ ರಾಕೆಟ್‌ನ ಮೊದಲ ಪರೀಕ್ಷಾರ್ಥ ಹಾರಾಟವನ್ನು ಯಶಸ್ವಿಯಾಗಿ ನಡೆಸಿದೆ. ರಾಕೆಟ್ ಅನ್ನು ಅದರ ಗರಿಷ್ಠ ೧೨೦ ಕಿ.ಮೀ. ವ್ಯಾಪ್ತಿಗೆ ಪರೀಕ್ಷಿಸಲಾಯಿತು, ಯೋಜಿಸಿದಂತೆ ಎಲ್ಲಾ ಇನ್-ಫ್ಲೈಟ್ ಕುಶಲತೆಯನ್ನು ಪ್ರದರ್ಶಿಸಿತು. ಲಾಂಗ್ ರೇಂಜ್ ಗೈಡೆಡ್ ರಾಕೆಟ್ ನಿಖರ ಗುರಿ ತಲುಪಿದೆ ಎಂದು ರಕ್ಷಣಾ ಸಚಿವಾಲಯ ಹೇಳಿದೆ. ಈ ರಾಕೆಟ್ ಅನ್ನು ಶಸ್ತ್ರಾಸ್ತ್ರ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ, ಹೈ ಎನರ್ಜಿ ಮೆಟೀರಿಯಲ್ಸ್ ರಿಸರ್ಚ್ ಲ್ಯಾಬೊರೇಟರಿಯ ಸಹಯೋಗದೊಂದಿಗೆ, ರಕ್ಷಣಾ ಸಂಶೋಧನಾ ಮತ್ತು ಅಭಿವೃದ್ಧಿ ಪ್ರಯೋಗಾಲಯ ಮತ್ತು ಇಮಾರತ್‌ನ ಸಂಶೋಧನಾ ಕೇಂದ್ರದ ನೆರವಿನೊಂದಿಗೆ ವಿನ್ಯಾಸಗೊಳಿಸಿದೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಈ ಸಾಧನೆಗಾಗಿ ಡಿಆರ್‌ಡಿಒ ಅನ್ನು ಅಭಿನಂದಿಸಿದ್ದಾರೆ. ರಾಕೆಟ್‌ಗಳ ಯಶಸ್ವಿ ವಿನ್ಯಾಸ ಮತ್ತು ಅಭಿವೃದ್ಧಿಯು ಸಶಸ್ತ್ರ ಪಡೆಗಳ ಸಾಮರ್ಥ್ಯಗಳನ್ನು ಹೆಚ್ಚಿಸುತ್ತದೆ. ಇದು ಪಥ ಪರಿವರ್ತಕವಾಗಲಿದೆ ಎಂದು ಬಣ್ಣಿಸಿದ್ದಾರೆ.

<>><><*><><<>

೨೦೨೪ರ ರಾಷ್ಟ್ರೀಯ ಅಂತರ್ಜಲ ಮೌಲ್ಯಮಾಪನದ ಪ್ರಕಾರ, ಅಂತರ್ಜಲವನ್ನು ಅತಿಯಾಗಿ ಬಳಕೆ ಮಾಡಿರುವ ೧೨೪ ಜಿಲ್ಲೆಗಳು ಮತ್ತು ನಿರ್ಣಾಯಕ ಜಿಲ್ಲೆಗಳ ಪ್ರಗತಿ ಪರಿಶೀಲನೆಯನ್ನು ಕೇಂದ್ರ ಜಲಶಕ್ತಿ ಸಚಿವ ಸಿ.ಆರ್. ಪಾಟೀಲ್ ನಿನ್ನೆ ನಡೆಸಿದರು.

<>><><*><><<>

ಭಾರತದ ಆರ್ಥಿಕತೆ, ೨೦೪೭- ೪೮ ವೇಳೆಗೆ ೨೬ ಟ್ರಿಲಿಯನ್ ಡಾಲರ್ ತಲುಪಲಿದೆ ಎಂದು ಆರ್ನೆಸ್ಟ್ ಮತ್ತು ಯಂಗ್- ಇ.ವೈ ಸಂಸ್ಥೆ ಅಂದಾಜಿಸಿದೆ.

ಮುಂದಿನ ಒಂದು ದಶಕ ಹಾಗೂ ಆ ನಂತರದ ಭಾರತದ ಆರ್ಥಿಕ ಸ್ಥಿತಿಗತಿ ಕುರಿತಂತೆ ವರದಿಯನ್ನು ಬಿಡುಗಡೆ ಮಾಡಿರುವ ಸಂಸ್ಥೆ, ಸದ್ಯ ಇರುವ ಆರ್ಥಿಕತೆ, ಸುಮಾರು ಐದು ಪಟ್ಟು ಹೆಚ್ಚಾಗಿ ೨೦೪೭-೪೮ ರವೇಳೆಗೆ ತಲಾ ಆದಾಯ ೧೫ ಸಾವಿರ ಡಾಲರ್ ತಲುಪುವ ನಿರೀಕ್ಷೆಯಿದೆ ಎಂದು ತಿಳಿಸಿದೆ.

<>><><*><><<>

ವನಿತೆಯರ ಕ್ರಿಕೆಟ್‌ನಲ್ಲಿ, ಭಾರತ ತಂಡವು ೫ನೇ ಮತ್ತು ಅಂತಿಮ ಟಿ-೨೦ ಪಂದ್ಯದಲ್ಲಿ ಇಂದು ಕೇರಳದ ತಿರುವನಂತಪುರಂನ ಗ್ರೀನ್‌ಫೀಲ್ಡ್ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ಶ್ರೀಲಂಕಾವನ್ನು ಎದುರಿಸಲಿದೆ. ಪಂದ್ಯವು ಸಂಜೆ ೭ ಗಂಟೆಗೆ ಆರಂಭವಾಗಲಿದೆ. ಮಹಿಳಾ ಟಿ ೨೦ ವಿಶ್ವಕಪ್ ಸಿದ್ಧತೆಯ ಭಾಗವಾಗಿ ಈ ಸರಣಿ ಭಾರತಕ್ಕೆ ನಿರ್ಣಾಯಕವಾಗಿದೆ.

<>><><*><><<>

ಕತಾರ್‌ನ ರಾಜಧಾನಿ ದೋಹಾನಲ್ಲಿ ನಡೆಯುತ್ತಿರುವ ೨೦೨೫ ರ ಫಿಡೆ ವಿಶ್ವ ಬ್ಲಿಟ್ಜ್ ಚೆಸ್ ಚಾಂಪಿಯನ್‌ಶಿಪ್‌ನ ಮೊದಲನೇ ದಿನದಾಟದಲ್ಲಿ ಭಾರತದ ಅರ್ಜುನ್ ಎರಿಗೈಸಿ ಅಗ್ರಶ್ರೇಯಾಂಕಿತರಾಗಿ ಹೊರಹೊಮ್ಮಿದ್ದಾರೆ. ಆಡಿದ ೧೩ ಸುತ್ತುಗಳಲ್ಲಿ ೧೦ ಅಂಕಗಳೊಂದಿಗೆ, ಅರ್ಜುನ್, ಮ್ಯಾಕ್ಸಿಮ್ ವಾಚಿಯರ್-ಲಾಗ್ರೇವ್ ಮತ್ತು ಫ್ಯಾಬಿಯಾನೊ ಕರುವಾನಾ ಅವರೊಂದಿಗೆ ಓಪನ್ ವಿಭಾಗದಲ್ಲಿ ಮುನ್ನಡೆ ಸಾಧಿಸಿದ್ದಾರೆ. ೧೧ ನೇ ಸುತ್ತಿನಲ್ಲಿ ಮೊದಲ ಸ್ಥಾನಕ್ಕೆ ತಲುಪಿದ ಅರ್ಜುನ್, ಮ್ಯಾಗ್ನಸ್ ಕಾರ್ಲ್ಸನ್ ವಿರುದ್ಧ ಗೆಲುವು ಸಾಧಿಸಿದ್ದಾರೆ.

<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>

<>><>< ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧೨ ಕ್ಕೆ ><><<>